ಅನಿಸಿತು. ಹಾಗಾಗಿ ನನ್ನದೇ ಆದ ಒಂದು ತಂಡ ಕಟ್ಟಿಕೊಂಡೆ. ವಿಸ್ಮಯಾ ಫಿಲ್ಮ್ಸ್ ಅಂತ ನಿರ್ಮಾಣ ಸಂಸ್ಥೆ ಪ್ರಾರಂಭಿಸಿದೆ. ಸ್ನೇಹಿತರು, ಸಿನಿಮಾರಂಗದವರು, ಕುಟುಂಬದವರಿಂದ ಬೆಂಬಲ ಸಿಕ್ಕಿತು. ಹಾಗಾಗಿ ನಿರ್ದೇಶನದ ಸಾಹಸಕ್ಕೆ ಕೈ ಹಾಕುತ್ತಿದ್ದೇನೆ' ಎನ್ನುತ್ತಾರೆ ವಿಸ್ಮಯಾ.

ಮೊದಲ ಪ್ರಯತ್ನದಲ್ಲಿ ಒಂದು ಮುದ್ದಾದ ಪ್ರೇಮಕಥೆಯನ್ನು ಹೇಳುವ ತವಕ ಅವರದ್ದು. 'ನನ್ನ ಮನಸಲ್ಲಿ ಸಾಕಷ್ಟು ಕಥೆಗಳಿವೆ. ಆದರೆ ಮೊದಲ ಪ್ರಯತ್ನದಲ್ಲಿ ಒಂದು ಕ್ಯೂಟ್ ಲವ್‌ಸ್ಟೋರಿ ಹೇಳಬೇಕು ಎಂದು ನಿರ್ಧರಿಸಿದೆ. ಪಾತ್ರಗಳಿಗಾಗಿ ಆಡಿಷನ್ ತೆಗೆದುಕೊಂಡಾಗ ರೇಖಾದಾಸ್ ಅವರ ಮಗಳು ಸಾತ್ವಿಕಾ (ಶ್ರಾವ್ಯಾ) ನಮ್ಮ ಕಥೆಗೆ, ಪಾತ್ರಕ್ಕೆ ಸೂಕ್ತವಾಗುತ್ತಾರೆ ಅನಿಸಿತು. ಹಾಗಾಗಿ ಅವರನ್ನೇ ನಾಯಕಿಯನ್ನಾಗಿ ಆಯ್ಕೆ ಮಾಡಿಕೊಂಡೆ. ಅವರಿಗೆ ಜೋಡಿಯಾಗಿ ಕಿಶನ್ ನಟಿಸುತ್ತಿದ್ದಾರೆ. ಬಿಗ್‌ಬಾಸ್ ರಿಯಾಲಿಟಿ ಶೋ ಸಮಯದಿಂದಲೂ ಅವರನ್ನು ನೋಡುತ್ತ ಬಂದಿದ್ದೇನೆ. ಹಾಗೆಯೇ ನಮ್ಮ ಸಿನಿಮಾದಲ್ಲಿ ಇನ್ನೊಬ್ಬ ನಾಯಕನಟ ಇದ್ದಾರೆ. ಆ ಪಾತ್ರದಲ್ಲಿ ಕ್ರಿಕೆಟರ್ ಪ್ರವೀಣ್ ನಟಿಸುತ್ತಿದ್ದಾರೆ' ಎಂದು ತಮ್ಮ ಸಿನಿಮಾ ಪಾತ್ರವರ್ಗದ ಕುರಿತು ಅವರು ವಿವರಿಸುತ್ತಾರೆ.

ಫೆ. 14ರಂದು ಪ್ರೇಮಿಗಳ ದಿನದಂತೇ ಸಿನಿಮಾದ ಟೈಟಲ್ ಲಾಂಚ್ ಮಾಡುವ ಯೋಜನೆಯನ್ನು ಅವರು ಹಾಕಿಕೊಂಡಿದ್ದಾರೆ. ಟೈಟಲ್ ಲಾಂಚ್ ನಂತರ ಚಿತ್ರೀಕರಣ ಪ್ರಾರಂಭಿಸಿ ಮೈಸೂರು, ಮಡಿಕೇರಿ ಮತ್ತು ಕಾರವಾರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿತ್ರೀಕರಣ ಮಾಡುತ್ತಾರಂತೆ.

ಮಧುಸೂದನ್ ಈ ಚಿತ್ರಕ್ಕೆ ಛಾಯಾಗ್ರಹಣ ಮಾಡುತ್ತಿದ್ದಾರೆ. ಜಯಂತ ಕಾಯ್ಕಿಣಿ ಬರೆಯಲಿರುವ ಹಾಡುಗಳಿಗೆ ವಾಸುಕಿ ವೈಭವ್ ಸಂಗೀತ ಸಂಯೋಜಿಸಲಿದ್ದಾರೆ.

'ಕನ್ನಡದಲ್ಲಿ ನಿರ್ದೇಶಕಿಯರು ವಿರಳ. ಸುಮನ್ ಕಿತ್ತೂರು, ಕವಿತಾ ಲಂಕೇಶ್ ಇವರೆಲ್ಲ ನನಗೆ ಸ್ಫೂರ್ತಿ. ತೆರೆಯ ಹಿಂದಿನ ಕೆಲಸಗಳಲ್ಲಿ ಮಹಿಳೆಯರು ಇನ್ನಷ್ಟು ತೊಡಗಿಕೊಳ್ಳಬೇಕು. ಆಗ ಮಾತ್ರ ಹೊಸ ಸಂವೇದನೆಯ ಸಿನಿಮಾಗಳು ಬರಲು ಸಾಧ್ಯ ಎನ್ನುವುದು ನನ್ನ ನಂಬಿಕೆ. ಹಾಗಾಗಿ ನಾನು ನನ್ನ ಸಂಸ್ಥೆಯಿಂದ ನಿರಂತರವಾಗಿ ಸಿನಿಮಾ ನಿರ್ಮಾಣ ಮಾಡುವ ಯೋಚನೆ ಹೊಂದಿದ್ದೇನೆ. ಇದೇ ವರ್ಷಾಂತ್ಯಕ್ಕೆ ಇನ್ನೊಂದು ಸಿನಿಮಾ ಘೋಷಣೆ ಮಾಡುವ ಉದ್ದೇಶವೂ ಇದೆ' ಎನ್ನುವ ವಿಸ್ಮಯಾ, ಪುರುಷಪ್ರಧಾನ ಚಿತ್ರರಂಗದಲ್ಲಿ ನಿರ್ದೇಶಕಿಯಾಗಿ ಹೆಜ್ಜೆಗುರುತು ಮೂಡಿಸುವ ಉಮೇದಿನಲ್ಲಿದ್ದಾರೆ. ■

# ವಾಣಿಜ್ಯ ಮಂಡಳಿಗೆ ಅಮಾವಾಸ್ಯೆ




ವಾಣಿಜ್ಯ ಮಂಡಳಿ ಮತ್ತೆ ಸುದ್ದಿಯಲ್ಲಿದೆ. ಒಳ್ಳೆಯ ಕಾರಣಕ್ಕಾಗಿ ಅದು ಸುದ್ದಿಯಾಗಿದ್ದು ಕಡಿಮೆಯೇ. ವಿವಾದ, ಒಳಜಗಳ, ಆರೋಪ, ಪ್ರತ್ಯಾರೋಪಗಳಲ್ಲಿ ಮುಳುಗೇಳುತ್ತಿರುವುದೇ ಹೆಚ್ಚು. ಈಗ ಸುದ್ದಿಯಾಗಿದ್ದೂ ಅಂಥದ್ದೇ ಒಂದು ಕಾರಣಕ್ಕೆ. ಈ ಸಲ ಅದು ಎದುರಿಸುತ್ತಿರುವ ಪ್ರತಿರೋಧ ತುಸು ಗಟ್ಟಿಯಾಗೇ ಆಗಿದ್ದು ಮತ್ತು ಮಂಡಳಿಯ ಒಳಗಿನಿಂದಲೇ ಬುಗಿಲೆದ್ದಿದೆ. ಎರಡು ಟಾಯ್ಲೆಟ್ ರಿಪೇರಿಗಾಗಿ ಮೂವತ್ತು ಲಕ್ಷ ಕರ್ಚು ಮಾಡಿದ್ದೂ ಸೇರಿದಂತೆ ಇಪ್ಪತ್ತು ಅಕ್ರಮ ಎಸಗಿದ ಆರೋಪ ಮಂಡಳಿಯ ಪದಾದಿಕಾರಿಗಳ ಮೇಲೆ ಬಂದಿದೆ.

ಬರೀ ಟಾಯ್ಲೆಟ್ ರಿಪೇರಿಗೇ ಮೂವತ್ತು ಲಕ್ಷ ವ್ಯಯವಾಗಿದೆಯೆಂದರೆ, ವಾಣಿಜ್ಯಮಂಡಳಿಯ ಯಾವ್ಯಾವ ಸಂದಿಗೊಂದಿಗಳಲ್ಲಿ ಉದುರಿದ ಗೋಡೆಬಣ್ಣ, ಮುರಿದ ಕುರ್ಚಿ ಕಾಲುಗಳಿಗೆ ಇನ್ನೂ ಎಷ್ಟೆಷ್ಟು ಲಕ್ಷ ರೂಪಾಯಿ ಲೇಪನ ಮಾಡಲಾಗಿದೆಯೋ ಸರ್ವನಿಯಾಮಕನಾದ ಗೋವಿಂದನೇ ಬಲ್ಲ!

ಅಂತೂ ಈಗ ವಾಣಿಜ್ಯಮಂಡಳಿಯ ಭ್ರಷ್ಟಾಚಾರದ ವಿರುದ್ಧ ಒಂದು ಗಟ್ಟಿ ದನಿ ಮೊಳಗಿದೆ. ವಾಣಿಜ್ಯ ಮಂಡಳಿಯ ಸದಸ್ಯರೂ ಆಗಿರುವ ನಿರ್ಮಾಪಕ ಕೃಷ್ಣೇಗೌಡ ಮತ್ತು ಪ್ರದೀಪ್ ಎಲ್. ಎನ್ನುವವರು ವಾಣಿಜ್ಯ ಮಂಡಳಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಒಂದು ಪಟ್ಟಿ ತಯಾರಿಸಿ ದೂರನ್ನೂ ನೀಡಿದ್ದಾರೆ. ಅದನ್ನು ಮುನ್ನಲೆಯಲ್ಲಿಟ್ಟುಕೊಂಡು, ಹಿರಿಯ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ನೇತೃತ್ವದಲ್ಲಿ ಚಿತ್ರರಂಗದ ಹಲವರು ನಿರ್ಮಾಪಕ, ನಿರ್ದೇಶಕರೆಲ್ಲ ಸೇರಿಕೊಂಡು ಪತ್ರಿಕಾಗೋಷ್ಠಿ ಮಾಡಿ ವಾಣಿಜ್ಯ ಮಂಡಳಿ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದ್ದಾರೆ.

ಬಾಬು ಅವರಂತೂ, 'ವಾಣಿಜ್ಯಮಂಡಳಿಗೆ ಅಮಾವಾಸ್ಯೆಯ ಕತ್ತಲು ಹಿಡಿದಿದೆ. ಅದು ಬಿಟ್ಟು ಹೋಗುವುದಿಲ್ಲವೆನಿಸುತ್ತದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹಾಗಿದ್ದರೆ ವಾಣಿಜ್ಯಮಂಡಳಿ ಯಾವತ್ತಾದರೂ ಹುಣ್ಣಿಮೆಯ ಬೆಳಕಿನಲ್ಲಿತ್ತೆ? ಖಂಡಿತ ಇಲ್ಲ. ವಾಣಿಜ್ಯ ಮಂಡಳಿ ಚಿತ್ರರಂಗಕ್ಕೆ ಪೂರಕವಾಗಿ ಹೇಗೆ ಕೆಲಸ ಮಾಡುತ್ತಿದೆ ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ಮೇಲಿನ ಪ್ರಶ್ನೆಗೆ ಉತ್ತರ ಇನ್ನಷ್ಟು ಸ್ಪಷ್ಟವಾಗುತ್ತದೆ. ಈ ಮಂಡಳಿಯ ಆಡಳಿತ ಮಂಡಳಿಯಲ್ಲಿ, ಸದಸ್ಯರ ಪಟ್ಟಿಯಲ್ಲಿ ಇರುವವರಲ್ಲಿ ಎಷ್ಟು ಜನ ನಿಜವಾಗಿಯೂ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ? ಚಿತ್ರರಂಗದ ಹಿತಸಾಧನೆಯ ಕಾಳಜಿ ಹೊಂದಿದ್ದಾರೆ ಎಂದರೆ ಉತ್ತರ ಖಂಡಿತ ನಿರಾಶಾದಾಯಕವೇ ಆಗಿರುತ್ತದೆ. ಈ ಪ್ರಶ್ನೆಗಳನ್ನು ಈಗಿನ ಅವಧಿಯ ಆಡಳಿತ ಮಂಡಳಿಗಲ್ಲ, ಯಾವಾಗಿನ ಆಡಳಿತ ಮಂಡಳಿಗೆ ಬೇಕಾದರೂ ಅನ್ವಯಿಸಿ ನೋಡಬಹುದು.

ವಾಣಿಜ್ಯಮಂಡಳಿಯ ಪಡಸಾಲೆ, ಕೆಲವು 'ದೊಡ್ಡವರ' ಹಿತಕಾಯುವ, 'ಸಣ್ಣವರ' ಮೇಲೆ ದರ್ಪ ತೋರುವ, ಚಿತ್ರರಂಗದಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಿದವರನ್ನು ಹಿಡಿದು ತಂದು 'ಬಾಯಿ ಮುಚ್ಚಿಸಿ' ರಾಜಿ ಮಾಡಿಸಿ ದಲ್ಲಾಳಿ ಕೆಲಸಕ್ಕೆ ಬಳಕೆಯಾಗಿದ್ದೇ ಹೆಚ್ಚು. ತಾನಲ್ಲದಿದ್ದರೆ ತನ್ನ ಅಜ್ಞಾಧಾರಕರನ್ನು ಕುರ್ಚಿಯ ಮೇಲೆ ಕೂಡಿಸುವುದು, ತನ್ನ ಮಕ್ಕಳನ್ನು ಹೇಗೋ ಮಾಡಿ ಒಳಗೆ ತೂರಿಸುವುದು – ಇಂಥ ಕೆಲಸಗಳೆಲ್ಲ ಇಲ್ಲಿ ಯಾವುದೇ ಸಿಗ್ಗಿಲ್ಲದೆಯೇ ನಡೆಯುತ್ತಿರುತ್ತವೆ. ಮತ್ತೆ ಚುನಾವಣೆಯನ್ನು ಮುಂದೂಡುವ ಹೊಸ ಚಾಳಿಯೊಂದು ಹಳೆ ವ್ಯಸನಗಳ ಪಟ್ಟಿಗೆ ಕಳೆದ ಸಲದಿಂದ ಸೇರ್ಪಡೆಯಾಗಿದೆ.

ಚಿತ್ರರಂಗದ ಹಿತರಕ್ಷಣೆಯ ಗಟ್ಟಿ ವೇದಿಕೆಯಾಗುವುದರ ಜೊತೆಗೆ, ಚಿತ್ರರಂಗದೊಳಗಿನ ಸಮಸ್ಯೆಗಳಿಗೂ ದಿಟ್ಟ ಪರಿಹಾರ ಕಂಡುಕೊಳ್ಳುವ ಜಾಗವಾಗಬೇಕಾಗಿದ್ದ ವಾಣಿಜ್ಯಮಂಡಳಿಯ 'ಸ್ವಯಂ ವಾಣಿಜ್ಯ ಪ್ರಕ್ರಿಯೆ'ಗಳು ಸದ್ಯಕ್ಕಂತೂ ನಿಲ್ಲುವ ಹಾಗೆ ತೋರುತ್ತಿಲ್ಲ. ಇಡೀ ಚಿತ್ರರಂಗ ಹತ್ತು ಹಲವು ಸಮಸ್ಯೆಗಳಿಂದ ತತ್ತರಿಸುತ್ತಿದ್ದರೆ, ವಾಣಿಜ್ಯಮಂಡಳಿಯ ಸದಸ್ಯರು ಮಾತ್ರ ಟಾಯ್ಲೆಟ್ಟಿನ ಆಚೀಚೆ ಓಡಾಡುವುದರಲ್ಲಿಯೇ ವ್ಯಸ್ತರಾಗಿದ್ದಾರೆ. ಇಷ್ಟೆಲ್ಲ ನಡೆಯುತ್ತಿದ್ದರೂ ಚಿತ್ರರಂಗದ ಬಹುತೇಕ ಗಣ್ಯಮಾನ್ಯರು ಈ ಬಗ್ಗೆ ತುಟಿಕ್ ಪಿಟಿಕ್ ಅನ್ನುತ್ತಿಲ್ಲ. ತೆರೆಯ ಮೇಲೆ ದೂಳೆಬ್ಬಿಸುವ ಹೀರೊಗಳಂತೂ ಮಾಳಿಗೆ ಮನೆಯ ಮೇಲೆ ನೆಮ್ಮದಿಯಿಂದ ಮಲಗಿರುವಂತಿದೆ.

ಈಗ ಒಂದಿಷ್ಟು ಜನರು ಅದರ ವಿರುದ್ಧ ಧ್ವನಿ ಎತ್ತಿರುವುದೇನೋ ನಿಜ. ಆದರೆ ಅಷ್ಟಕ್ಕೇ ಎಲ್ಲ ಪರಿಹಾರವಾಗಿಬಿಡುತ್ತದೆಂದೇನೂ ಇಲ್ಲ. ಈಗ ಮಂಡಳಿಯನ್ನು ಸುತ್ತಿಕೊಂಡಿರುವ ಅಮಾವಾಸ್ಯೆಯ ಇಡೀ ಚಿತ್ರರಂಗಕ್ಕೆ ವಿಸ್ತರಣೆಯಾಗುವ ಅಪಾಯವೂ ಇಲ್ಲದಿಲ್ಲ. ಇಡೀ ಚಿತ್ರರಂಗಕ್ಕೇ ಆವರಿಸಿರುವ ಅಮವಾಸ್ಯೆಯ ಕತ್ತಲು ಕಳೆಯಲು ಯಾವುದೋ ಸೂಪರ್‌ಹೀರೊ ಬರಬೇಕಷ್ಟೆ. ■